ಮೂಲಕ ತಿಳಿಸಿಕೊಡಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದುದು ಸತಿಪತಿ ಭಾವ. ಇಲ್ಲಿ ಅಂಗವೇ ಸತಿ; ಲಿಂಗವೇ ಪತಿ. ಈ ಭಾವದ ತುತ್ತತುದಿಯನ್ನು ಅಕ್ಕಮಹಾದೇವಿ ಏರಿದ್ದಾಳೆ. ಅಕ್ಕನು ಲಿಂಗದ ಸತಿಯಾಗಿ, ತನ್ನ ಸರ್ವಸ್ವವನ್ನೂ ಅದಕ್ಕೆ ಸಮರ್ಪಿಸಿಕೊಂಡು ಹೀಗೆ ಹೇಳುತ್ತಾಳೆ:

**ನಾನು ನಿನಗೊಲಿದೆ, ನೀನು ಎನಗೊಲಿದೆ.**
**ನೀನೆನ್ನನಗಲದಿಪ್ಪೆ, ನಾ ನಿನ್ನನಗಲದಿಪ್ಪೆನಯ್ಯ**
**ನಿನಗೆ ನನಗೆ ಬೇರೊಂದು ಠಾವುಂಟೆ?**
**ನೀನು ಕರುಣೆ ಎಂಬುದ ನಾನು ಬಲ್ಲೆನು,**
**ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ**
**ನೀನೇ ಬಲ್ಲೆ ಚೆನ್ನಮಲ್ಲಿಕಾರ್ಜುನಾ**

ಈ ಭಾವದ ವಿವರದೊಳಗೆ ಸಕಲ ಜೀವಿಗಳೂ 'ಸತಿ'ಯರೇ; ಪರಮಾತ್ಮನು ಎಲ್ಲರಿಗೂ ಸಮಾನವಾಗಿರುವ 'ಪತಿ'.

## ಅಂಗಾಂಗಸಾಮರಸ್ಯದ ಮಹತ್ವ

ಸಾಂಪ್ರದಾಯಿಕ ವೇದಾಂತಕ್ಕೂ, ಲಿಂಗಾಂಗಸಾಮರಸ್ಯದ ಸಿದ್ಧಾಂತಕ್ಕೂ ಹೋಲಿಸಿ ನೋಡಿದರೆ, ಅನೇಕ ಸ್ವಾರಸ್ಯಕರ ವಿಷಯಗಳು ಹೊರಹೊಮ್ಮುತ್ತವೆ. ಅದ್ವೈತ ವೇದಾಂತದಲ್ಲಿ ಪಾರಮಾರ್ಥಿಕ ನೆಲೆಯಲ್ಲಿ ಜಗತ್ತಿಗೆ ಹಾಗೂ ಜೀವಕ್ಕೆ ಸ್ಥಾನವೇ ಇಲ್ಲ. ಅದನ್ನು ಭ್ರಮೆ ಅಥವಾ ಮಿಥ್ಯೆ ಎಂದು ಅಲ್ಲಗಳೆಯಲಾಗುತ್ತದೆ. ಆದರೆ ವೀರಶೈವ ಪಥದಲ್ಲಿ ಜಗತ್ತು ಕೂಡ ಶಿವರೂಪವೇ; ಆದರೆ ಅದು ಅವಿದ್ಯೆಯಿಂದ ಬದ್ಧವಾದ 'ಅಂಗ'ನಿಗೆ ಕಾಣುವ ರೂಪವಷ್ಟೇ.

ಪ್ರಕೃತಿಯನ್ನು ಅದ್ವೈತದಲ್ಲಿ ಸರ್ವಥಾ ನಿರಾಕರಿಸುತ್ತಾರೆ. ಆದರೆ ಇಲ್ಲಿ ಅದು ಕೂಡ ಶಿವರೂಪವೇ. 'ಜಡ ಮತ್ತು ಚೈತನ್ಯಗಳೆರಡೂ ಪರಶಿವನಲ್ಲಿಯೇ ಅಂತರ್ಗತವಾಗಿವೆ. ಎಲ್ಲವೂ ಶಿವಮಯವೇ' ಎಂಬುದು ಇಲ್ಲಿ ಕಾಣುವ ಗ್ರಹಿಕೆ. ಅವಿದ್ಯಾರೂಪನಾದ ಆತ್ಮವೇ ಜೀವಿಯೆಂದು ಕರೆಸಿಕೊಳ್ಳುತ್ತದೆ ಎಂದು ಅದ್ವೈತ ಹೇಳುತ್ತದೆ. ಮಲತ್ರಯಗಳನ್ನು ಧರಿಸಿದ ಲಿಂಗವೇ ಅಂಗವಾಗಿ ಕಾಣುತ್ತಿದೆಯೆಂದು ಇಲ್ಲಿ ಹೇಳಲಾಗಿದೆ.

ವೀರಶೈವ ಸಿದ್ಧಾಂತದ ಪ್ರಕಾರ, ಸ್ವತಃ ಶಿವನೇ ತನ್ನ ಲೀಲೆಗಾಗಿ 'ಲಿಂಗ' ಮತ್ತು 'ಅಂಗ'ಗಳಾಗುವುದು, 'ಅಂಗ'ವು ಮತ್ತೆ 'ಲಿಂಗ'ದೊಡನೆ ಸಾಮರಸ್ಯ ಹೊಂದುವುದು – ಇವೆಲ್ಲವೂ ಶಿವನೆಂಬ ಪರತತ್ತ್ವದ ಭಾಗವಾಗಿಯೇ ನಡೆಯುತ್ತದೆ. ಹೀಗಾಗಿ ಎಂದೆಂದೂ, ಎಲ್ಲ ಹಂತಗಳಲ್ಲಿಯೂ 'ಶಿವನೇ ಲಿಂಗ', 'ಶಿವನೇ ಅಂಗ', 'ಶಿವನೇ ಎಲ್ಲವೂ.' ಇದು **'ನೇಹ ನಾನಾಸ್ತಿ ಕಿಂಚನ'** ಪರವಸ್ತುವೊಂದು ಬಿಟ್ಟು ಬೇರೇನೂ ಇಲ್ಲ' ಎಂಬ ಉಪನಿಷತ್ತಿನ ಆಶಯಕ್ಕೆ ಪೂರಕವಾಗಿದೆ. ಇದನ್ನು ಒಪ್ಪಿಕೊಂಡ ಬಳಿಕ ನಾವು ಯಾವುದನ್ನೂ ನಿರಾಕರಿಸಬೇಕಾಗಿಲ್ಲ; ಯಾವುದನ್ನೂ ಭ್ರಮೆಯೆಂದು ದೂರಬೇಕಾಗಿಲ್ಲ. ಏಕೆಂದರೆ ಎಲ್ಲವೂ ಆ ಪರವಸ್ತುವೇ ಆಗಿರುತ್ತದೆ. ಶರಣರು ಅಂಥ ಪರಮ ಸ್ಥಿತಿಯನ್ನು ಮುಟ್ಟಿದ್ದರು. ಸಕಲೇಶ ಮಾದರಸರೆಂಬ ಶರಣರು ಹೀಗೆ ಹೇಳುತ್ತಾರೆ:

**ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ**
**ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ**
**ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ**
**ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ**
**ಸಕಳೇಶ್ವರಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ**

ಇದನ್ನು ನಾವು ಸಮನ್ವಯಸಿದ್ಧಿಯ ಅನುಭವವೆನ್ನಬಹುದು. ಇಲ್ಲಿ ಸಕಲವೂ ತನ್ನೊಳಗೆ ಅಡಗುತ್ತದೆ. ತಾನೇ ಸಕಲದಲ್ಲಿಯೂ ಹಬ್ಬಿಕೊಂಡಿರುವ ಅನುಭವವಾಗುತ್ತದೆ. ಆಗ 'ತಾನು' ಮತ್ತು 'ಸಕಲ' – ಇವುಗಳಿಗೆ ಇರುವ ಭೇದ ನಿವಾರಣೆಯಾಗುತ್ತದೆ. ಇದನ್ನೇ ವೀರಶೈವ ಪಾರಿಭಾಷಿಕ ಭಾಷೆಯಲ್ಲಿ ವಚನಕಾರರು ಹೀಗೆ ಹೇಳುತ್ತಾರೆ:

**ಸಕಲವನೆನ್ನೊಳಗಿರಿಸಿ, ಸಕಲದೊಳಹೊರಗೆ**
**ಎನ್ನ ವ್ಯಾಪಕವ ಮಾಡಿ ತೋರಿದ**
**ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಗುರುವೇ ನಮೋ ನಮೋ.**

ಇಂಥ ಅನುಭವದ ಬೆಳಕನ್ನು ಖ್ಯಾತ ಲೇಖಕ ಪ್ರೊ. ಸಂ.ಶಿ. ಭೂಸನೂರಮಠ ಅವರು ಹೀಗೆ ಎತ್ತಿ ತೋರಿಸುತ್ತಾರೆ: "ವಿಶ್ವದೊಳಗೆ ಕಂಡುಬರುವ ಈ ಅಖಂಡಚೈತನ್ಯವು ವಿಶ್ವ ವಿಸ್ತಾರದ ಹೊರಗೂ ಹಬ್ಬಿಕೊಂಡು ಇದ್ದು, ತನ್ನ ಗರ್ಭದೊಳಗೆ ಧರಿಸಿಕೊಂಡಿದೆ, ಎಲ್ಲ ಬ್ರಹ್ಮಾಂಡಗಳ ವಿಸ್ತಾರವನ್ನು. ಇದೋ ಇದೇ ವಿಶ್ವೇಶ್ವರ ಲಿಂಗವೇ, 'ಎನ್ನಂಗದೊಳಹೊರಗೆ ತೋರಿ' ಬರುತ್ತಿದೆ. ಮತ್ತೆ ಅದೇ ಲಿಂಗದಲ್ಲಿ ಇರಿಸಿದ ನನ್ನ ಅಂಗ ವಿಸ್ತಾರವಾಗಿಬಿಟ್ಟಿದೆ. ಆಗ ನಾನು ವಿಶ್ವದೆತ್ತರ, ವಿಶ್ವವನ್ನು ಗರ್ಭೀಕರಿಸಿಕೊಂಡು ಇರುವ ಲಿಂಗದೆತ್ತರವಾಗಿಬಿಟ್ಟಿದ್ದೇನೆ. ಈ ನಾನು ಇಡೀ ವಿಶ್ವದಲ್ಲಿ ಹಬ್ಬಿಕೊಂಡಿದ್ದೇನೆ, ಲಿಂಗದಲ್ಲಿ ಹಬ್ಬಿ ವ್ಯಾಪಿಸಿಕೊಂಡಿದ್ದೇನೆ." (***ವಚನ ಸಾಹಿತ್ಯ ಸಂಗ್ರಹ,*** ಪುಟ xxxVII)

ಈ ಸಿದ್ಧಾಂತವು ಬಾಳಿಗೆ ಒಂದು ವಿಶಿಷ್ಟ ದೃಷ್ಟಿಯನ್ನು ಕೊಡುತ್ತದೆ. ಬಾಳು, ಜಗತ್ತು, ಜೀವಿ – ಎಲ್ಲವೂ ಆ ಪರತತ್ತ್ವದ ಛಾಯೆಗಳಾಗಿ ಕಂಡುಬರುತ್ತದೆ. ಸುಖ, ದುಃಖ, ನೋವು, ನಲಿವು, ಒಳಿತು, ಕೆಡುಕು, ಸೋಲು, ಗೆಲುವು, ಪಾಪ, ಪುಣ್ಯ – ಎಲ್ಲವೂ ಈಗ ಹೊಸ ಅರ್ಥದಲ್ಲಿ ಕಾಣತೊಡಗುತ್ತವೆ. ಅಂದರೆ, ಎಲ್ಲವೂ ಆ ಪರತತ್ತ್ವದ ಲೀಲಾರೂಪಗಳೇ ಎಂಬ ಭಾವ ಬಲಿಯುತ್ತದೆ. 'ಬಾಳಿನಲ್ಲಿ ನಡೆಯುವುದೆಲ್ಲವೂ ಅವನಿಚ್ಛೆ' ಎಂಬ ನಿರಾಳ ಭಾವ ನೆಲೆಯೂರುತ್ತದೆ. 'ನಾವೆಂದೂ ಭಗವಂತನಿಂದ ಬೇರೆಯಾದವರಲ್ಲ' ಎಂಬ ಶ್ರೀಸಾಮಾನ್ಯರ ಈ ಗ್ರಹಿಕೆ ಜೀವನಕ್ಕೆ ಸುಸ್ಥಿರವಾದ ರಕ್ಷಣೆಯನ್ನೂ, ತಾಯಿಮಡಿಲಿನ ನೆಮ್ಮದಿಯನ್ನೂ ನೀಡುತ್ತದೆ. ಇದನ್ನೇ ಅಲ್ಲವೇ, ಎಲ್ಲ ಜೀವಿಗಳೂ ಹಗಲೂ ಇರುಳೂ ಹುಡುಕುತ್ತಿರುವುದು?

## ಆಧಾರ ಗ್ರಂಥಗಳು:


೧. **ವಚನ ಸಾಹಿತ್ಯ ಸಂಗ್ರಹ** : ಸಂ. ಶಿ. ಭೂಸನೂರಮಠ
೨. **ವಚನಧರ್ಮಸಾರ** : ಎಂ. ಆರ್. ಶ್ರೀನಿವಾಸಮೂರ್ತಿ
೩. **ವೀರಶೈವ ಪಥ** : ಪ್ರೊ. ಸ. ಸ. ಮಾಳವಾಡ
೪. **ಶರಣರ ಅನುಭಾವ ಸಾಹಿತ್ಯ** : ಡಾ. ಎಚ್. ತಿಪ್ಪೇರುದ್ರಸ್ವಾಮಿ



# ಶರಣರ ನೀತಿ

ಸಂ.ಶಿ. ಭೂಸನೂರಮಠ

ಶರಣನಾದವನು ನಡೆದುಕೊಳ್ಳುವ ಬಗೆ ಏನು? ಅವನ ಜೀವನದ ನೀತಿಯೇನು? ಈ ಪ್ರಶ್ನೆಗಳಿಗೆ ಚೇತೋಹಾರಿಯಾದ ಉತ್ತರ ಈ ಲೇಖನದಲ್ಲಿದೆ. ವಚನ ಸಾಹಿತ್ಯದ ಅಧ್ಯಯನದಲ್ಲಿ ದಿಗ್ಗಜರಾದ ಲೇಖಕರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

ನೀತಿ, ನಡತೆಯ ವಿಚಾರ ತುಂಬಿ ತುಳುಕಾಡುತ್ತಿದೆ, ವಚನಸಾಹಿತ್ಯದಲ್ಲಿ. ಶರಣನ ನೀತಿ, ನಡತೆ, ಕಾಯಕ, ದಾಸೋಹ, ಸದ್ಗುಣ ಸದ್ವರ್ತನೆ ಹುಟ್ಟಿಹರಿವ 'ಸ್ವಯಂಭು'ವಾದ 'ಸಹಜ' ಸ್ಥಲವನ್ನು, ಕತ್ತಲೆಯ ಮಹಾಮುಸುಕನ್ನು ಅಳಿದು ನಿತ್ಯ ಬೆಳಗುವ ಮಾನವನ ನಿಜಸ್ಥಲವನ್ನು ಒಮ್ಮೆ ನಾವು ಹೊಕ್ಕು ನೋಡಬೇಕು. ಅವನದು ಲಿಂಗಾಂಗಭಾವ. ಅವನೊಬ್ಬ ಮಾನವಬ್ರಹ್ಮ, ಮಾನವಲಿಂಗ. ಅಂಥವನಲ್ಲಿ ಹೊಮ್ಮುವ ನೀತಿನಡತೆ, ಆಚಾರ ವಿಚಾರ, ವರ್ತನೆ ಶೀಲ ಎಂಥದಿರಬಹುದು?

ಅರಿವ ಬೆಳಗುಮಯವಾದ ಪರಮಾಕಾಶಕ್ಕೆ ಕೈಕಾಲು ಮೂಡಿದರೆ? ಕಣ್ಣು ಕಿವಿ ನಾಲಗೆ ತಲೆ ಬಂದರೆ? ದೇವರು ಆಕಾರವಾಗಿ ಭಕ್ತ ಲಿಂಗನಾದರೆ? ಆಗ, 'ಭಕ್ತ ನಡೆದರೆ ಲಿಂಗ ನಡೆಯಿತು, ಭಕ್ತ ನುಡಿದರೆ ಲಿಂಗದ ಕಣ್ಣು ನೋಡಿತು, ಭಕ್ತನ ಮನ ಹರಿದರೆ ಮನದ ಮೇಲೆ ಲಿಂಗದೇವ ಕುಳಿತು ಹಾರಾಡಿದ' ಎಂಬಂತಾಗುತ್ತದೆ.

ಅಂಥ ಸ್ಥಿತಿಯಲ್ಲಿ, ಭಕ್ತ ಉಂಡರೆ ಲಿಂಗದ ಹೊಟ್ಟೆಗೆ, ಭಕ್ತ ಭೋಗಿಸಿದರೆ ಲಿಂಗದ ಪ್ರಸಾದಕ್ಕೆ, ಭಕ್ತನ ನೀತಿ ಲಿಂಗದ ರೀತಿ, ಆತನ ಗುಣ ಲಿಂಗದ ಜಾತಿ, ಆತನ ಶೀಲ ಸದಾಚಾರ ಸದ್ವರ್ತನೆ ಲಿಂಗವರ್ತನೆ ಎಂಬಂತಾಗುತ್ತದೆ. ಇಲ್ಲಿ ವೇದ ಶಾಸ್ತ್ರ ಬೇಕಿಲ್ಲ. ಪುರಾಣ ಪುಣ್ಯಕಥೆಗಳ ಆವಶ್ಯಕತೆಯಿಲ್ಲ. ಸಂಪ್ರದಾಯ ಪರಂಪರೆ ಗುಡಿ ಮಠಗಳ ಮಾಡು ಬಿಡುಗಳ ಮಾತಿಲ್ಲ.

ಇದೋ ಇಲ್ಲಿದೆ, ಬೆಲ್ಲ ಜೇನು ಕಬ್ಬಿನ, ಹಣ್ಣುಹಂಪಲದ ನೀತಿ ನಡತೆ; ಶ್ರೀಗಂಧ, ಸಂಪಿಗೆ ಮಲ್ಲಿಗೆ ಗುಲಾಬಿ ಮಂದಾರಗಳ ಮಕರಂದ ವಾಸನೆಯ ಸದಾಚಾರ ಶಿವವರ್ತನೆ; ಬ್ರಹ್ಮಶೀಲದ ಮಹಾಭವ್ಯ; ಲಿಂಗಭಕ್ತಿಯ ಪರಮಶಿವವಾದ ದೇವನ ದಿವ್ಯಸಾಮ್ರಾಜ್ಯ.

ಬೆಳಗಿನ ಭಕ್ತನಿಗೆ ಎಲ್ಲವೂ ಒಂದೇ ಸಮ. ವಂದಿಸಲಿ ನಿಂದಿಸಲಿ ಒಂದೇ ಸಮ. ಹೊಗಳಲಿ ತೆಗಳಲಿ ಒಂದೇ ಸಮ. ಪ್ರೀತಿ ದ್ವೇಷ ಬಂದರೆ ಅದಕ್ಕೆ ಒಂದೇ ಉತ್ತರ, ಪ್ರೇಮ – ಲಿಂಗಪ್ರೇಮ. ಜಗತ್ತಿನ ಮೋಸ, ಅನ್ಯಾಯ, ಕಪಟ, ವಂಚನೆಗೆ ಶರಣನ ಒಂದೇ ಉತ್ತರವೆಂದರೆ ನಿರಂಜನ ಸತ್ಯ.

ಆತ ನುಡಿದರೆ ಮೃದುವಚನ, ಭೂತಹಿತ. ನಡೆದರೆ ಸದಾಚಾರದ ಗೊಂಚಲು, ನೋಡಿದರೆ ಕಾರುಣ್ಯದ ಗೊನೆ. ನಮ್ಮ